# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ : 1312

ಸದಸ್ಯರ ಹೆಸರು : ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ

ಉತ್ತರಿಸುವ ಸಚಿವರು : ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು

ಉತ್ತರಿಸುವ ದಿನಾಂಕ : 24.12.2021

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ಉಡುಪಿ ಜಿಲ್ಲೆಯ ಹೃದಯ ಭಾಗದಲ್ಲಿರುವ ರಾಜ್ಯ ರಸ್ತೆ ಸಾರಿಗೆ ನಿಗಮದ ಸಿಟಿ ಬಸ್ ನಿಲ್ದಾಣಕ್ಕೆ ತಗುಲಿದ ವೆಚ್ಚವೆಷ್ಟು; ಈ ಕಟ್ಟಡದಲ್ಲಿರುವ ವಾಣಿಜ್ಯ ಕೊಠಡಿಗಳ ಸಂಖ್ಯೆ ಎಷ್ಟು; ಖಾಲಿಯಿರುವ ಮತ್ತು ಬಾಡಿಗೆ ಪಡೆದಿರುವ ಕೊಠಡಿಗಳ ಸಂಖ್ಯೆ ಎಷ್ಟು; ವಾರ್ಷಿಕ ಬಾಡಿಗೆ ಮೊತ್ತವೆಷ್ಟು; ಈ ಕಟ್ಟಡದ ನಿರ್ಮಾಣದ ಗುತ್ತಿಗೆ ಪಡೆದ ಗುತ್ತಿಗೆದಾರರ ಹೆಸರು ಮತ್ತು ವಿಳಾಸ ಯಾವುದು; (ಕೊಠಡಿವಾರು ಮಾಹಿತಿಯನ್ನು ನೀಡುವುದು) | ಉಡುಪಿ ಜಿಲ್ಲೆಯ ಕ.ರಾ.ರ.ಸಾ.ನಿಗಮದ ನಗರ ಸಾರಿಗೆ ಬಸ್ ನಿಲ್ದಾಣವನ್ನು ರೂ.393.00 ಲಕ್ಷಗಳ ವೆಚ್ಚದಲ್ಲಿ ನಿರ್ಮಿಸಲಾಗಿದೆ.<br>ಉಡುಪಿ ನಗರದಲ್ಲಿನ ಸಿಟಿ ಬಸ್ಸು ನಿಲ್ದಾಣದಲ್ಲಿರುವ ಒಟ್ಟು ವಾಣಿಜ್ಯ ಕೊಠಡಿಗಳ ಸಂಖ್ಯೆ-15. ಇದರಲ್ಲಿ 13 ಕೊಠಡಿಗಳನ್ನು ಬಾಡಿಗೆಗೆ ಪಡೆಯಲಾಗಿದೆ ಹಾಗೂ 02 ಕೊಠಡಿಗಳು ಖಾಲಿ ಇರುತ್ತವೆ.<br>ಸದರಿ ಬಸ್ ನಿಲ್ದಾಣದಲ್ಲಿ ವಾಣಿಜ್ಯ ಮಳಿಗೆಗಳನ್ನು ಪರವಾನಿಗೆ ನೀಡಿರುವ ಕೊಠಡಿವಾರು ಮಾಹಿತಿಯನ್ನು ಅನುಬಂಧ-ಅ ನಲ್ಲಿ ನೀಡಲಾಗಿದೆ.<br>ಈ ಕಟ್ಟಡದ ನಿರ್ಮಾಣದ ಗುತ್ತಿಗೆ ಪಡೆದ ಗುತ್ತಿಗೆದಾರರ ಹೆಸರು ಮತ್ತು ವಿಳಾಸ: ಶ್ರೀ ಉದಯ್‌ಶೆಟ್ಟಿ, 'ದೇವಿಪ್ರಸಾದ್' ಗಾಂಧಿ ಮೈದಾನ ಮುನಿಯಾಲು (ಪೋಸ್ಟ್) ಕಾರ್ಕಳ (ತಾ), ಉಡುಪಿ (ಜಿಲ್ಲೆ). |
| ಆ. | ಉಡುಪಿ ಜಿಲ್ಲೆಯಲ್ಲಿ ಮಂಜೂರಾಗಿದ್ದ ನರ್ಮ್ ಬಸ್‌ಗಳ ಸಂಖ್ಯೆ ಎಷ್ಟು; ಕೋವಿಡ್ ಪ್ರಥಮ ಲಾಕ್‌ಡೌನ್ ಪೂರ್ವದಲ್ಲಿ ಅವುಗಳು ಸಂಚರಿಸುತ್ತಿದ್ದ ಮಾರ್ಗಗಳು ಯಾವುವು; ಪ್ರಸ್ತುತ ಸಂಚರಿಸುತ್ತಿರುವ ಮಾರ್ಗಗಳು ಮತ್ತು ಟ್ರಿಪ್‌ಗಳ ಸಂಖ್ಯೆ ಎಷ್ಟು; (ಬಸ್‌ವಾರು, ಟ್ರಿಪ್‌ವಾರು ಮಾಹಿತಿ ನೀಡುವುದು) | ಉಡುಪಿ ಜಿಲ್ಲೆಗೆ 30 ನರ್ಮ್ ಬಸ್ಸುಗಳು ಮಂಜೂರಾಗಿರುತ್ತವೆ. ಕೋವಿಡ್-19 ಪೂರ್ವದಲ್ಲಿ 22 ಅನುಸೂಚಿಗಳಿಂದ 251 ಸುತ್ತುವಳಿಗಳಲ್ಲಿ ವಿವಿಧ ಮಾರ್ಗಗಳಲ್ಲಿ ಸಾರಿಗೆ ಸೌಲಭ್ಯ ಕಲ್ಪಿಸಲಾಗಿದ್ದು, ವಿವರಗಳನ್ನು ಅನುಬಂಧ-ಆ ನಲ್ಲಿ ನೀಡಲಾಗಿದೆ.<br>ಕೋವಿಡ್-19ರ ಲಾಕ್‌ಡೌನ್ ಹಿನ್ನೆಲೆಯಲ್ಲಿ ಸಾರಿಗೆಗಳ ಕಾರ್ಯಾಚರಣೆಯನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಲಾಗಿದ್ದು, ಲಾಕ್‌ಡೌನ್ ತೆರವುಗೊಂಡ ನಂತರ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕ ಪ್ರಯಾಣಿಕರ ಅವಶ್ಯಕತೆಗೆ ಅನುಗುಣವಾಗಿ ಹಂತಹಂತವಾಗಿ ಸಾರಿಗೆಗಳ ಕಾರ್ಯಾಚರಣೆಯನ್ನು ಪುನರಾರಂಭಿಸಲಾಗುತ್ತಿದೆ. ಪ್ರಸ್ತುತ 15 ಅನುಸೂಚಿಗಳಿಂದ 157 |

| | | |
|---|---|---|
| | | ಸುತ್ತುವಳಿಗಳಲ್ಲಿ ವಿವಿಧ ಮಾರ್ಗಗಳಲ್ಲಿ ಸಾರಿಗೆ ಸೌಲಭ್ಯ ಕಲ್ಪಿಸಲಾಗಿದ್ದು, ವಿವರಗಳನ್ನು ಅನುಬಂಧ-ಇ ನಲ್ಲಿ ನೀಡಲಾಗಿದೆ.<br>ಪ್ರಸ್ತುತ ಕಲ್ಪಿಸಿರುವ ಸಾರಿಗೆ ಸೌಲಭ್ಯ ಅವಶ್ಯಕತೆಗೆ ಅನುಗುಣವಾಗಿದೆ. |
| ಇ. | ಉಡುಪಿ ಜಿಲ್ಲೆಯಲ್ಲಿ ಮಂಜೂರಾಗಿದ್ದ ನರ್ಮ್ ಬಸ್‌ಗಳನ್ನು ಬೇರೆ ಜಿಲ್ಲೆಗಳಿಗೆ ವರ್ಗಾಯಿಸಲಾಗಿದೆಯೇ; ಎಷ್ಟು ಬಸ್‌ಗಳನ್ನು ಯಾವ ಜಿಲ್ಲೆಗೆ ವರ್ಗಾಯಿಸಲಾಗಿದೆ; ಯಾವ ಕಾರಣಕ್ಕಾಗಿ ವರ್ಗಾಯಿಸಲಾಗಿದೆ; | ಕ.ರಾ.ರ.ಸಾ.ನಿಗಮದ ಮಂಗಳೂರು ವಿಭಾಗದ ಉಡುಪಿ ಘಟಕಕ್ಕೆ ಮಂಜೂರಾಗಿದ್ದ ನರ್ಮ್ ಬಸ್ಸುಗಳನ್ನು ಬೇರೆ ಜಿಲ್ಲೆಗಳಿಗೆ ವರ್ಗಾಯಿಸಿರುವುದಿಲ್ಲ.<br>ಮಂಜೂರಾಗಿದ್ದ 30 ನರ್ಮ್ ಬಸ್ಸುಗಳನ್ನು ಹೊರತುಪಡಿಸಿ, ಹೆಚ್ಚುವರಿಯಾಗಿದ್ದ 3 ಮಿಡಿ ವಾಹನಗಳನ್ನು ಹಾಸನ ವಿಭಾಗಕ್ಕೆ ವರ್ಗಾಯಿಸಲಾಗಿರುತ್ತದೆ. |
| ಈ. | ಜನನಿಬಿಡ ಪ್ರದೇಶದಲ್ಲಿ ಖಾಸಗಿ ಬಸ್‌ಗಳು ಪ್ರತಿನಿತ್ಯ ಸಂಚರಿಸುವ ಮಾರ್ಗದಲ್ಲಿಯೇ ನರ್ಮ್ ಬಸ್‌ಗಳು ನಷ್ಟವನ್ನು ಹೊಂದಲು ಕಾರಣವಾಗಿದೆಯೇ; ಜನರ ಬೇಡಿಕೆಯನ್ನು ಹೊಂದಿದ್ದರೂ ನರ್ಮ್ ಬಸ್‌ಗಳು ಸಂಚಾರವನ್ನು ನಿಲ್ಲಿಸಲು ಕಾರಣವೇನು? | ನಿಗಮದ ವತಿಯಿಂದ ಉಡುಪಿ ಜಿಲ್ಲೆಯಲ್ಲಿ ಖಾಸಗಿ ಬಸ್‌ಗಳು ಸಂಚರಿಸುವ ಮಾರ್ಗಗಳು ಮತ್ತು ಇತರೇ ಮಾರ್ಗಗಳಲ್ಲಿ ಆಚರಣೆ ಮಾಡುತ್ತಿರುವ ನರ್ಮ್ ನಗರ ಸಾರಿಗೆಗಳನ್ನು ನಷ್ಟದಲ್ಲಿ ಆಚರಣೆ ಮಾಡಲಾಗುತ್ತಿದೆ.<br>ಕೋವಿಡ್-19ರ ಲಾಕ್‌ಡೌನ್ ಹಿನ್ನೆಲೆಯಲ್ಲಿ ಸಾರಿಗೆಗಳ ಕಾರ್ಯಾಚರಣೆಯನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಲಾಗಿತ್ತು. ಲಾಕ್‌ಡೌನ್ ತೆರವುಗೊಂಡ ನಂತರ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕ ಪ್ರಯಾಣಿಕರ ದಟ್ಟಣೆ/ ಅವಶ್ಯಕತೆಗೆ ಅನುಗುಣವಾಗಿ ಹಂತಹಂತವಾಗಿ ಸಾರಿಗೆಗಳ ಕಾರ್ಯಾಚರಣೆಯನ್ನು ಹೆಚ್ಚಿಸಿ ಆಚರಣೆ ಮಾಡಲಾಗುತ್ತಿದೆ.<br>ಪ್ರಸ್ತುತ ಕಲ್ಪಿಸಿರುವ ಸಾರಿಗೆ ಸೌಲಭ್ಯ ಅವಶ್ಯಕತೆಗೆ ಅನುಗುಣವಾಗಿದೆ. |

ಸಂಖ್ಯೆ: ಟಿಡಿ 306 ಟಿಸಿಕ್ಯೂ 2021

(ಬಿ.ಶ್ರೀರಾಮುಲು)
ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ
ಕಲ್ಯಾಣ ಸಚಿವರು

LC

ಚುಕ್ಕೆ ಗುರುತಿಲ್ಲದ ಪ್ರ.ಸಂ:1312ಕ್ಕೆ **ಅನುಬಂಧ- "ಅ"**

## ಉಡುಪಿ ನಗರ ಬಸ್ಸುನಿಲ್ದಾಣದಲ್ಲಿರುವ ವಾಣಿಜ್ಯ ಮಳಿಗೆಗಳ ಆದಾಯ ವಿವರಗಳು:
(ದಿನಾಂಕ: 13.12.2021 ರಂತೆ)

| ಕ್ರ.ಸಂ | ಮಳಿಗೆಗಳ ವಿವರ | ಪರವಾನಿಗೆ ದಾರರ ವಿವರ | ಕರಾರು ಒಪಂಪ್ಪದದ ಅವಧಿ | | ವಿಸ್ತೀರ್ಣ (ಚ.ಅಡಿ) | ಪ್ರಸ್ತುತ ಮಾಸಿಕ ಪರವಾನಿಗೆ ಶುಲ್ಕ | ವಾರ್ಷಿಕ ಪರವಾನಿಗೆ ಶುಲ್ಕ |
|---|---|---|---|---|---|---|---|
| 1 | ಜನರಲ್ ಸ್ಟಾಲ್, ಮಳಿಗೆ ಸಂ: 01 ಮತ್ತು 02 | ಖಾಲಿ ಇದೆ | 01.10.2020 | 30.09.2025 | 101.18 | ದಿನಾಂಕ 05.10.2021 | |
| 2 | | | 09.02.2021 | 08.02.2026 | 62.11 | ದಿನಾಂಕ 10.12.2021 | |
| 3 | ಜನರಲ್ ಸ್ಟಾಲ್, ಮಳಿಗೆ ಸಂ: 03 | ಹರೀಶ್ ನಾಯ್ಕ್ | 01.10.2020 | 30.09.2025 | 62.22 | 11000 | 132000 |
| 4 | ಜನರಲ್ ಸ್ಟಾಲ್, ಮಳಿಗೆ ಸಂ: 04 | ರಾಜೇಶ್ ಮೊಬೆಯನ್ | 01.10.2020 | 30.09.2025 | 245.31 | 35035 | 420420 |
| 5 | ಜನರಲ್ ಸ್ಟಾಲ್, ಮಳಿಗೆ ಸಂ: 05 | ಪ್ರಶಾಂತ್ | 01.10.2020 | 30.09.2025 | 245.31 | 38609 | 463308 |
| 6 | ಜನರಲ್ ಸ್ಟಾಲ್, ಮಳಿಗೆ ಸಂ: 06 | ದಿವಾಕರ್ ಸನಿಲ್ | 01.10.2020 | 30.09.2025 | 188.26 | 30250 | 363000 |
| 7 | ಜನರಲ್ ಸ್ಟಾಲ್, ಮಳಿಗೆ ಸಂ: 07 | ದಿವಾಕರ್ ಸನಿಲ್ | 01.10.2020 | 30.09.2025 | 182.56 | 31350 | 376200 |
| 8 | ಜನರಲ್ ಸ್ಟಾಲ್, ಮಳಿಗೆ ಸಂ: 08 | ಶಶಿಕಾಂತ್.ಡಿ | 01.10.2020 | 30.09.2025 | 182.56 | 22122 | 265464 |
| 9 | ಜನರಲ್ ಸ್ಟಾಲ್, ಮಳಿಗೆ ಸಂ: 09 | ದಿವಾಕರ್ ಸನಿಲ್ | 01.10.2020 | 30.09.2025 | 286.97 | 32450 | 389400 |
| 10 | ಜನರಲ್ ಸ್ಟಾಲ್, ಮಳಿಗೆ ಸಂ: 10 | ದಿವಾಕರ್ ಸನಿಲ್ | 01.10.2020 | 30.09.2025 | 293.64 | 18926 | 227112 |
| 11 | ಜನರಲ್ ಸ್ಟಾಲ್, ಮಳಿಗೆ ಸಂ: 11 | ವಸಂತ.ಕೆ | 01.10.2020 | 30.09.2025 | 286.97 | 18150 | 217800 |
| 12 | ಜನರಲ್ ಸ್ಟಾಲ್, ಮಳಿಗೆ ಸಂ: 12 | ನಾರಾಯಣ. ದೇವಪ್ಪ | 01.10.2020 | 30.09.2025 | 116.79 | 5638 | 67656 |
| 13 | ಮಳಿಗೆ ಸಂಖ್ಯೆ:13 ಉಪಹಾರ ಗೃಹ (ಸಸ್ಯಾಹಾರಿ) | ದಿವಾಕರ್ ಸನಿಲ್ | 01.03.2021 | 28.02.2026 | 987.7 | 63000 | 756000 |
| 14 | ಮಳಿಗೆ ಸಂಖ್ಯೆ:14 ಉಪಹಾರ ದರ್ಶಿನಿ (ಸಸ್ಯಾಹಾರಿ) | ದಿವಾಕರ್ ಸನಿಲ್ | 24.03.2021 | 23.03.2026 | 361.67 | 38000 | 456000 |
| 15 | ಮಳಿಗೆ ಸಂಖ್ಯೆ:15 (ಯಾತ್ರಿ ನಿವಾಸ/ ಹ್ಯಾಂಡಿಕ್ರಾಫ್ಟ್ ಮಳಿಗೆ) | ದಿವಾಕರ್ ಸನಿಲ್ | 01.10.2020 | 30.09.2030 | 5856.58 | 111222 | 1334664 |

ವ್ಯವಸ್ಥಾಪಕ ನಿರ್ದೇಶಕರು
ಕರಾರಸಾನಿಗಮ